ಮೈಸೂರು ಸ್ಟೇಟ್ ರೈಲ್ವೆ.

ಪ್ರಕಟನೆ:

ಬೆಂಗಳೂರು—ತುಮಕೂರು ರೈಲ್ವೆ ತೆರಿಯೋಣವು.

ಸ್ಯ 1884ನೇ ಇಸವಿ ಆಗಸ್ಟು ತಾರೀಖು 11ನೇ ಲಾಗಾಯತು ಬೆಂಗಳೂರಿಂದ 43 ಮೈಲಿ ಧೂರದಲ್ಲಿ ಇರುವ ತುಮಕೂರುವರಿಗೆ ರೈಲ್ವೆ ಭಂಡಿಗಳ ಮೇಲೆ ಪ್ರಯಾಣಸ್ಥರು ಅವರ ಲಗ್ಗೇಜ್, ಕುದುರೆಗಳು, ಭಂಡಿಗಳು, ನಾಯಿಗಳು, ಪಾರಸಲ್‌ಗಳು ಮತ್ತು ಗೂಡ್ಸು ಯಾನೆ ಸಾಮಾನುಗಳು ಮೈಸೂರು ರೈಲ್ವೆಯ ತಮಾಂ ಸ್ಟೇಷ್ಯಗಳಿಂದ ಸಾಗಿಸಲ್ಪಡುವವು.

ತುಮಕೂರು ಲೈನಲ್ಲಿ ಇರತಕ್ಕ ಸ್ಟೇಷ್ಯಗಳು ಯಾವವಂದರೆ:—

ಬೆಂಗಳೂರು, ಬಾಣಾವಾರ, ಗೊಲ್ಲಹಳ್ಳಿ, ದೊಡ್ಡಜೆಲೆ, ನಿಡವಂಡ, ಹಿರೇಹಳ್ಳೀ, ತುಮಕೂರು.

ಸ್ಟೇಷ್ಯಗಳು.		ಪ್ರಯಾಣಸ್ಥರ ಭಂಡಿ.	ಚಾರ್ಜುಗಳು.								
			೧ನೇ ತರಗತಿ.			೨ನೇ ತರಗತಿ.			೩ನೇ ತರಗತಿ.		
		ಬೆಳ್ಳಿಗ್ಯೆ.									
ಬೆಂಗಳೂರು	ಹೊರಡುವದು	7–30	2	11	0	1	5	6	0	10	9
ತುಮಕೂರು	ಕೇರುವದು	10–37									
		ಸಾಯಿಂತ್ರ.									
ತುಮಕೂರು	ಹೊರಡುವದು	2–18	2	11	0	1	5	6	0	10	9
ಬೆಂಗಳೂರು	ಕೇರುವದು	5–25									

ವಿಶೇಷ ತಪಶೀಲುಗಳು ಪ್ರತ್ಯೇಕ ಇಸ್ತಿಹಾರಿನಲ್ಲಿ ಛಾಪಿಸಲ್ಪಟ್ಟಿರುತ್ತೆ.

ಬೆಂಗಳೂರು,
4ನೇ ಆಗಸ್ಟು 1884ನೇ ಇಸವಿ.

ಪಿ. ರೀಡ್ ಬೀಚರ್,
ಮ್ಯಾನೆಜರ್.

ಕ್ರಿಸ್ಟಲ್ಲೈಸ್ಡ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ಮೆಂಟ್ ಕೋಠಿಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಜ್ಡ್ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು ಕಲ್ಕತ್ತೆ ಬಳಿ ಸೀರ್‌ಪೂರ್ ಸಮೀಪದಲ್ಲಿ ರಾಯಲ್‌ಬೊಟಾನಿಕ್ ಗಾರ್ಡ್ಸ್ ಸೂಪರ್‌ಟೆಂಡೆಂಟರಿಂದ ಗವರ್ಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಒಂದು ಸಲಕ್ಕೆ ಇಪ್ಪತ್ತು ಪೌಂಡು ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಒಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡ್ಸ್ ಸೂಪರ್‌ಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಒಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯರ್ಸ್ ಮತ್ತು ನೇಟಿವ್ ಡ್ರಗ್ಗಿಸ್ಟ್‌ಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಪಾಸಲ್ ಹನ್ನೆರಡಾಣೆ ಜಾಸ್ತಿ.